**ಓ.ಎಸ್. ನಂ.  45/2021** **ಡಿ.ಡಬ್ಲ್ಯೂ- 3**

**ಸಾಕ್ಷಿಯನ್ನು ದಿನಾಂಕ  25.10.2023 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಪಾಟೀ ಸವಾಲುಃ ವಾದಿ ಪರ ಶ್ರೀ ಕೆ.ಆರ್ ವಕೀಲರಿಂದಃ

ನಾನು 9 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ.  ನನಗೆ ಕನ್ನಡ ಓದಲು ಮತ್ತು ಬರೆಯಲು ಬರುತ್ತದೆ.  ಮೂರು ಮಹಡಿಗಳು ಸೇರಿ ದಾವಮನೆಯ ಸರ್ಕಾರಿ ಮೌಲ್ಯ ಎಷ್ಟು ಇರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ದಾವಮನೆಯ ಕ್ರಯದ ವ್ಯವಹಾರದಲ್ಲಿ ನಾನು ಭಾಗಿಯಾಗಿರುವುದಿಲ್ಲ.  ಪ್ರತಿವಾದಿಯು ವಾದಿಗೆ ಯಾವ ದಿನಾಂಕದಂದು ಹಣ ನೀಡಿರುತ್ತಾರೆ ಎಂದು ಗೊತ್ತಿರುತ್ತದಾ ಎಂದರೆ ಸಾಕ್ಷಿದಾರರು ಪೂರ್ಣ ಹಣವನ್ನು ಯಾವಾಗ ನೀಡಿರುತ್ತಾರೆ ಎಂದು ಗೊತ್ತಿರುವುದಿಲ್ಲ ಎನ್ನುವರು.  ವಾದಿಗೆ ಕೃಷ್ಣ ಎಂಬು ಮಗನಿರುತ್ತಾನೆ ಎಂದರೆ ಸರಿ. ಸದರಿ ಕೃಷ್ಣ ಮತ್ತು ಅವರ ಹೆಂಡತಿ ಮಕ್ಕಳು ದಾವಮನೆಯ ಮೊದಲನೇ ಮಹಡಿಯಲ್ಲಿ ವಾಸ ಮಾಡುತ್ತಿದ್ದಾರೆ ಎಂದರೆ ನನಗೆ ಗೊತ್ತಿರುವುದಿಲ್ಲ.  ದಾವಮನೆಯ ಮೊದಲನೇ ಮಹಡಿಯಲ್ಲಿ ಈಗ ಯಾರು ವಾಸ ಮಾಡಿಕೊಂಡಿರುತ್ತಾರೆ ಎಂದು ನಾನು ನೋಡಿರುವುದಿಲ್ಲ.  ವಾದಿ ಮತ್ತು ಪ್ರತಿವಾದಿಯ ನಡುವೆ ನೆಲಮಹಡಿಗೆ ಮಾತ್ರ ಮಾತುಕತೆಯಾಗಿತ್ತು ಎಂದರೆ ನನಗೆ ಗೊತ್ತಿರುವುದಿಲ್ಲ.  ಆ ರೀತಿ ನೆಲಮಹಡಿಗೆ ಮಾತ್ರ ಎಂದು ವಾದಿಯನ್ನು ಕರೆದುಕೊಂಡು ಹೋಗಿ ಕ್ರಯಪತ್ರದಲ್ಲಿ ಸಂಪೂರ್ಣ ಮನೆ ಎಂದು ನಮೂದು ಮಾಡಿ, ಹಣವನ್ನು ಸಹ ವಾದಿಗೆ ಪಾವತಿ ಮಾಡಿರುವುದಿಲ್ಲ ಎಂದು ನನಗೆ ಗೊತ್ತಿರುವುದಿಲ್ಲ.  ನಿಡಿ1 ಕ್ರಯಪತ್ರವನ್ನು ತಯಾರಿಸುವ ಸಮಯದಲ್ಲಿ ನಾನು ಹಾಜರಿರಲಿಲ್ಲ.  ನಾನು ತಾಲ್ಲೂಕು ಕಛೇರಿಗೆ ಇ.ಸಿ ತೆಗೆದುಕೊಳ್ಳಲು ಹೋಗಿದ್ದು ವಾದಿ ಮತ್ತು ಪ್ರತಿವಾದಿಯರಿಗೆ ನಾನು ಪರಿಚಯವಿದ್ದರಿಂದ ಕ್ರಯಪತ್ರವನ್ನು ಓದಿ ಹೇಳಿ ಸಾಕ್ಷಿದಾರನಾಗಿ ಸಹಿ ಮಾಡಲು ಹೇಳಿರುತ್ತಾರೆ.  ನನಗೆ ವಾದಿ ಸಾಕ್ಷಿ-2 ಮತ್ತು 3 ರವರು ಯಾರೆಂದು ಗೊತ್ತಿರುವುದಿಲ್ಲ.  ನಾನು ಪ್ರತಿವಾದಿಗೆ ಸ ಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.  ವಾದಿ ಮತ್ತು ಪ್ರತಿವಾದಿಯರ ನಡುವೆ ನೆಲಮಹಡಿಯನ್ನು ಮಾತ್ರ ಮಾರಾಟ ಮಾಡಲು ಮಾತುಕತೆಯಾಗಿದ್ದು ಕ್ರಯಪತ್ರದಲ್ಲಿ ಪೂರ್ಣ ಮನೆ ಎಂದು ನಮೂದು ಮಾಡಲು ನಾನು ಸಹ ಸಹಾಯ ಮಾಡಿರುತ್ತೇನೆ ಎಂದರೆ ಸರಿಯಲ್ಲ.  ದಾವ ಸಂಪೂರ್ಣ ಮನೆ 2020 ರಲ್ಲಿ ಸರ್ಕಾರಿ ಮೌಲ್ಯ 21,65,272/- ರೂ. ಆಗಿತ್ತು ಎಂದರೆ ನನಗೆ ಗೊತ್ತಿರುವುದಿಲ್ಲ.  ಸದರಿ ಮನೆಯ ಮೌಲ್ಯ ಓಪನ್ ಮಾರ್ಕೆಟಿನಲ್ಲಿ 40-45 ಲಕ್ಷ ಇತ್ತು ಎಂದರೆ ನನಗೆ ನನಗೆ ಗೊತ್ತಿರುವುದಿಲ್ಲ.  ನಾನು ಸರಗೂರಿನ ಸ್ಥಳೀಯ ವ್ಯಕ್ತಿಯಾಗಿದ್ದು, ಮಾರುಕಟ್ಟೆ ಮೌಲ್ಯ ಗೊತ್ತಿದ್ದರೂ ಸಹ ಪ್ರತಿವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.